

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ.

## ಇಂಡೋನೇಶಿಯಾದ ಮೌಲವಿ ಸುಯೂತಿ ಅಝೀಝ್ ಸಾಹೇಬರ ಸ್ಮರಣೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 30–11–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್. ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸಲಿರುವ ಸಹಾಬರಲ್ಲಿ ಮೊದಲಿನವರು ಹಝ್ರತ್ ಸಾಬಿತ್ ಬಿನ್ ಖಾಲಿದ್ ಅನ್‌ಸಾರಿ ರಝಿಯಲ್ಲಾಹು ಅನ್‌ಹು. ಅವರು ಬದರ್, ಉಹುದ್, ಯಮಾಮ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಯಮಾಮ ಯುದ್ಧದಲ್ಲಿ ಶಹೀದರಾದರು. ಇನ್ನು ಹಝ್ರತ್ ಅಬ್ದುಲ್ಲಾ ಬಿನ್ ಅರ್‌ಫತ(ರ). ಅವರು ಹಝ್ರತ್ ಜಅಫರ್ ಬಿನ್ ಅಬೀ ತಾಲಿಬರ ಜೊತೆ ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನು ಹಝ್ರತ್ ಉತ್‌ಬ ಬಿನ್ ಅಬ್ದುಲ್ಲ(ರ). ಅವರು ಬೈಅತ್ ಅಖಬ ಮತ್ತು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಖೈಸ್ ಬಿನ್ ಅಬೀ ಸಅಸಅ ಅನ್‌ಸಾರಿ(ರ). ಅವರು ಎಪ್ಪತ್ತು ಅನ್‌ಸಾರ್‌ಗಳ ಜೊತೆ ಬೈಅತೆ ಅಖಬದಲ್ಲಿ ಭಾಗವಹಿಸಿದ್ದರು. ಅವರು ಬದರ್, ಉಹುದ್, ಯುದ್ಧಗಳಲ್ಲಿ ಭಾಗವಹಿಸಿದ್ದರು. ಬದರ್ ಯುದ್ಧ ಮಾಡಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸೈನ್ಯದೊಂದಿಗೆ ಹೊರಟಾಗ ಮದೀನದ ಸಮೀಪ ಬುಯೂತುಸ್ಸುಖ್‌ಯ ಬಳಿ ಶಿಬಿರ ಹೂಡಿದರು. ಜೊತೆ ಸವಾರಿ ಮಾಡಲು ಆಶಿಸಿ ಬಂದಿದ್ದ ಚಿಕ್ಕ ಮಕ್ಕಳನ್ನು ಅಲ್ಲಿಂದ ಮದೀನಕ್ಕೆ ಮರಳಿ ಕಳುಹಿಸಿದರು. ಸುಖ್‌ಯದಿಂದ ಹೊರಡುವ ಮೊದಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖೈಸ್ ಬಿನ್ ಅಬೀ ಸಅ್‌ಸಆರೊಂದಿಗೆ ಮುಸ್ಲಿಮರ ಸಂಖ್ಯೆಯನ್ನು ಎಣಿಸಲು ಹೇಳಿದರು. ಹಝ್ರತ್ ಖೈಸ್ ಎಣಿಸಿ ಅವರ ಸಂಖ್ಯೆ 313 ಎಂದು ಹೇಳಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂತೋಷಗೊಂಡು ಹೇಳಿದರು: ತಾಲೂತ್ ಜೊತೆಗೂಡಿ ಹೋರಾಡಿದವರ ಸಂಖ್ಯೆ ಸಹ ಇಷ್ಟೇ ಆಗಿತ್ತು ಎಂದು.

ಹಝ್ರತ್ ಖೈಸ್ ಅವರನ್ನು ಬದರ್ ಯುದ್ಧದ ದಿನ ಸಾಖ ಸೈನ್ಯ ವಿಭಾಗದ ದಳಪತಿಯನ್ನಾಗಿ ಮಾಡಲಾಗಿತ್ತು. ಸೈನ್ಯವನ್ನು ಹಿಂಬಾಗದಿಂದ ರಕ್ಷಿಸುವ ಸೇನೆಯ ವಿಭಾಗದ ಹೆಸರು ಸಾಖ ಎಂದಾಗಿದೆ. ಹಝ್ರತ್ ಖೈಸ್(ರ), ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದರು: ನಾನು ಪವಿತ್ರ ಖುರ್‌ಆನನ್ನು ಪೂರ್ಣವಾಗಿ ಎಷ್ಟು ಕಾಲಾವಧಿಯಲ್ಲಿ ಪಠಿಸಬಹುದು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು ಹದಿನೈದು ರಾತ್ರಿಗಳಲ್ಲಿ ಓದಿ ಮುಕ್ತಾಯಗೊಳಿಸಬಹುದು. ಹಝ್ರತ್ ಖೈಸ್ ಹೇಳಿದರು: ನನಗೆ ಅದಕ್ಕಿಂತ ಕಡಿಮೆ ಕಾಲಾವಧಿಯಲ್ಲಿ ಪಠಿಸಿ ಮುಗಿಸುವ ಶಕ್ತಿಯಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಒಂದು ಶುಕ್ರವಾರದಿಂದ ಇನ್ನೊಂದು ಶುಕ್ರವಾರದ ತನಕದ ಕಾಲಾವಧಿಯಲ್ಲಿ ಪಠಿಸಿ ಮುಕ್ತಾಯಗೊಳಿಸಿರಿ. ಆಗ ಹಝ್ರತ್ ಖೈಸ್ ಹೇಳಿದರು: ನನಗೆ ಅದಕ್ಕಿಂತಲೂ ಕಡಿಮೆ ಕಾಲಾವಧಿಯಲ್ಲಿ ಪಠಿಸಿ ಪೂರ್ಣಗೊಳಿಸುವ ಸಾಮರ್ಥ್ಯವಿದೆ. ಹಝ್ರತ್ ಖೈಸ್ ದೀರ್ಘಕಾಲ ಇದೇ ರೀತಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು. ಅವರು ವೃದ್ಧರಾಗಿ ಕಣ್ಣುಗಳಿಗೆ ಪಟ್ಟಿ ಕಟ್ಟಲು ಪ್ರಾರಂಭಿಸಿದಾಗ ಹದಿನೈದು ರಾತ್ರಿಗಳಲ್ಲಿ ಪವಿತ್ರ ಖುರ್‌ಆನ್ ಪೂರ್ಣವಾಗಿ ಪಠಿಸಲು ಪ್ರಾರಂಭಿಸಿದರು. ಆಗ ಅವರು ಹೇಳುತ್ತಿದ್ದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನಗೆ ನೀಡಿದ ಬಿಡುವು ನಾನು ಅಂಗೀಕರಿಸಿದ್ದರೆ ಎಷ್ಟು ಚೆನ್ನಾಗಿತ್ತು ಎಂದು.

ಇನ್ನೊಬ್ಬ ಸಹಾಬಿ ಹಝ್ರತ್ ಉಬೈದ ಬಿನ್ ಹಾರಿಸ್(ರ). ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪದ ಸಂಬಂಧಿಯಾಗಿದ್ದರು. ಅವರು ಆರಂಭದಲ್ಲಿಯೇ ವಿಶ್ವಾಸಿಗಳಾಗಿದ್ದವರಲ್ಲಿ ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರು ಅರ್‌ಖಮ್ ಪ್ರವೇಶಿಸುವ ಮೊದಲೇ ಅವರು ವಿಶ್ವಾಸಿಯಾಗಿದ್ದರು. ಹಝ್ರತ್ ಉಬೈದ(ರ), ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ವಿಶಿಷ್ಟ ಗೌರವಕ್ಕೆ ಪಾತ್ರರಾಗಿದ್ದರು. ಅವರು ಬನೂ ಅಬ್ದು ಮುನಾಫ್ ಗೋತ್ರದ ನಾಯಕರಲ್ಲಿ ಒಬ್ಬರಾಗಿದ್ದರು. ಹಝ್ರತ್ ಉಬೈದ ಬಿನ್ ಹಾರಿಸ್(ರ) ತನ್ನ ಇಬ್ಬರು ಸಹೋದರರಾದ ಹಝ್ರತ್ ತುಫೈಲ್ ಬಿನ್ ಹಾರಿಸ್ ಮತ್ತು ಹಝ್ರತ್ ಹುಸೈನ್ ಬಿನ್ ಹಾರಿಸ್ ಜೊತೆಗೆ ಮದೀನಕ್ಕೆ ಹಿಜ್‌ರತ್ ಹೋಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಹಾರಿಸ್ ಮತ್ತು ಹಝ್ರತ್ ಉಮೈರ್ ಬಿನ್ ಅಲ್‌ಹಮಾಮ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಅವರಿಬ್ಬರೂ ಬದರ್ ಯುದ್ಧದಲ್ಲಿ ಶಹೀದರಾದರು.ಮದೀನಕ್ಕೆ ಹಿಜ್‌ರತ್ ಹೋಗಿ ಎಂಟು ತಿಂಗಳ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಹಾರಿಸ್ ನೇತೃತ್ವದಲ್ಲಿ ಅರುವತ್ತು ಅಥವಾ ಎಂಬತ್ತು ಸವಾರರನ್ನು ಕಳುಹಿಸಿದರು. ಈ ಸಂಘಕ್ಕೋಸ್ಕರ ಒಂದು ಬಿಳಿ ಪತಾಕೆಯನ್ನು ಸಿದ್ಧಪಡಿಸಿದಾಗ ಅದನ್ನು ಹಝ್ರತ್ ಮುಸ್ತಹ್ ಬಿನ್ ಅಸಾಸ(ರ) ಎತ್ತಿ ಹಿಡಿದರು. ಈ ಸೇನಾದಳದ ಉದ್ದೇಶ ಖುರೈಶರ ಒಂದು ವ್ಯಾಪಾರ ಸಂಘವನ್ನು ಮಾರ್ಗದಲ್ಲಿ ತಡೆಗಟ್ಟುವುದಾಗಿತ್ತು. ಖುರೈಶರ

ವ್ಯಾಪಾರಿ ಸಂಘದ ನಾಯಕ ಅಬೂ ಸುಫ್‌ಯಾನ್ ಆಗಿದ್ದರು. ಖುರೈಶಿಗಳ ವ್ಯಾಪಾರಿ ಸಂಘದಲ್ಲಿ ಇನ್ನೂರು ಜನರಿದ್ದರು. ಸಹಾಬರ ತಂಡ ರಾಬಿಖ್ ಕಣಿವೆಯಲ್ಲಿ ವ್ಯಾಪಾರಿ ಸಂಘಕ್ಕೆ ಎದುರಾಯಿತು. ಎರಡು ತಂಡಗಳ ಮಧ್ಯೆ ಬಾಣ ಪ್ರಯೋಗದ ಹೊರತು, ಸಾಲುಗಟ್ಟಿ ಯುದ್ಧ ನಡೆಯಲಿಲ್ಲ. ಮುಸ್ಲಿಮರ ಕಡೆಯಿಂದ ಪ್ರಥಮವಾಗಿ ಬಾಣ ಹೂಡಿದ ಸಹಾಬಿ ಹಝ್‌ರತ್ ಸಅದ್ ಬಿನ್ ಅಬೀ ವಖಾಸ್(ರ) ಆಗಿದ್ದರು. ಇದು ಇಸ್ಲಾಮ್ ಕಡೆಯಿಂದ ಚಲಾಯಿಸಲಾದ ಪ್ರಥಮ ಬಾಣವಾಗಿತ್ತು. ಹಝ್‌ರತ್ ಉಬೈದ ಬಿನ್ ಹಾರಿಸ್ ನೇತೃತ್ವದಲ್ಲಿ ನಡೆಸಲಾದ ಇಸ್ಲಾಮಿನ ಎರಡನೆ ಸರಿಯ್ಯ (ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನೇರವಾಗಿ ಭಾಗವಹಿಸದ ಯುದ್ಧ) ಅದಾಗಿತ್ತು. ಹಝ್‌ರತ್ ಉಬೈದ(ರ) ಬದರ್ ಯುದ್ಧದ ಸಂದರ್ಭದಲ್ಲಿ ವಲೀದ್ ಬಿನ್ ಉತ್‌ಬನ ವಿರುದ್ಧ ಹೋರಾಡಿದ್ದರು. ಹದೀಸುಗಳಲ್ಲಿ ಹೀಗೆ ವರದಿಯಾಗಿದೆ. ಪವಿತ್ರ ಖುರ್‌ಆನಿನ ಒಂದು ವಚನ ಇದರ ಬಗ್ಗೆ ಅವತೀರ್ಣಗೊಂಡಿತು ಎಂದು. ಹಝ್‌ರತ್ ಅಲಿ(ರ) ವರದಿ ಮಾಡುತ್ತಾರೆ: ಪವಿತ್ರ ಖುರ್‌ಆನಿನ ವಚನ **ಹಾಝಾನಿ ಖಸ್‌ಮಾನಿಖ್‌ತಸಮೂ ಫೀ ರಬ್ಬಿಹಿಮ್** ಬದರ್ ಸಂದರ್ಭದಲ್ಲಿ ಹೋರಾಡಿದವರಿಗೆ ಸಂಬಂಧಿಸಿ ಅವತೀರ್ಣಗೊಂಡಿದೆ. ಹಾಗೆ ಹೋರಾಡಿದ್ದು ಹಝ್‌ರತ್ ಹಮ್‌ಝ ಬಿನ್ ಅಬ್ದುಲ್ ಮುತ್ತಲಿಬ್, ಹಝ್‌ರತ್ ಅಲಿ ಬಿನ್ ಅಬೂತಾಲಿಬ್, ಹಝ್‌ರತ್ ಉಬೈದ ಬಿನ್ ಹಾರಿಸ್‌ರವರ ತಂಡ ಮತ್ತು ಉತ್‌ಬ ಬಿನ್ ರಬೀಅ, ಶೈಬ ಬಿನ್ ರಬೀಅ ಮತ್ತು ವಲೀದ್ ಬಿನ್ ರಬೀಅರ ತಂಡ.

ಸುನನ್ ಅಬೂ ದಾಊದ್‌ನಲ್ಲಿ ಈ ಹೋರಾಟದ ವಿವರಣೆ ಹೀಗೆ ನೀಡಲಾಗಿದೆ: ಹಝ್‌ರತ್ ಅಲಿ ವರದಿ ಮಾಡುತ್ತಾರೆ: ಉತ್‌ಬ ಬಿನ್ ರಬೀಅ ಮತ್ತು ಅವನ ಹಿಂದೆ ಅವನ ಪುತ್ರ ಮತ್ತು ಸಹೋದರ ಕೂಗಿ ಹೇಳಿದರು: ನಮ್ಮನ್ನು ಎದುರಿಸಲು ಮುಂದೆ ಬರುವವರು ಯಾರಿದ್ದಾರೆ? ಅನ್‌ಸಾರ್‌ಗಳ ಅನೇಕ ಯುವಕರು ಅವರಿಗೆ ಉತ್ತರ ನೀಡಿದರು. ಉತ್‌ಬ ಕೇಳಿದನು: ನೀವು ಯಾರು? ಆ ಯುವಕರು ಹೇಳಿದರು: ನಾವು ಅನ್‌ಸಾರ್‌ಗಳೆಂದು. ಉತ್‌ಬ ಹೇಳಿದ: ನಮಗೆ ನಿಮ್ಮೊಂದಿಗೆ ಯಾವ ಕೊಡು ಕೊಳ್ಳುವಿಕೆಗಳೂ ಇಲ್ಲ. ನಾವು ಕೇವಲ ನಮ್ಮ ಚಿಕ್ಕಪ್ಪನ ಪುತ್ರರ ವಿರುದ್ಧ ಯುದ್ಧ ಮಾಡುವ ನಿರ್ಧಾರ ಮಾಡಿದ್ದೇವೆ. ಆಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೇ ಹಮ್‌ಝ ಎದ್ದೇಳಿರಿ, ಅಲಿ ಎದ್ದು ನಿಲ್ಲು, ಹೇ ಉಬೈದ ಬಿನ್ ಹಾರಿಸ್ ಮುಂದೆ ಸಾಗು. ಹಝ್‌ರತ್ ಅಲಿ ಹೇಳುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವನಿ ಆಲಿಸಿದ ಕೂಡಲೆ ಹಝ್‌ರತ್ ಹಮ್‌ಝ ಉತ್‌ಬನ ಎದುರಿಗೆ ಸಾಗಿದರು. ನಾನು ಶೈಬನ ಕಡೆಗೆ ಸಾಗಿದೆ. ಉಬೈದ ಮತ್ತು ವಲೀದ್ ಮಧ್ಯೆ ಹೋರಾಟ ನಡೆಯಿತು. ಇಬ್ಬರೂ ಒಬ್ಬರಿನ್ನೊಬ್ಬರನ್ನು ತೀವ್ರವಾಗಿ ಗಾಯಗೊಳಿಸಿದರು. ನಾವು ವಲೀದನ ಕಡೆಗೆ ತಿರುಗಿ ಅವನನ್ನು ಕೊಂದೆವು. ನಾವು ಉಬೈದರನ್ನು ಯುದ್ಧ ಕ್ಷೇತ್ರದಿಂದ ಹೊರಗೆ ತೆಗೆದುಕೊಂಡು ಹೋದೆವು. ಬದರ್ ಸಮೀಪವಿರುವ ಸಫ್ರಾ ಎಂಬಲ್ಲಿ ಅವರು ನಿಧನ ಹೊಂದಿದರು. ಅಲ್ಲಿಯೇ ಅವರನ್ನು ದಫನ್‌ಗೊಳಿಸಲಾಯಿತು. ಒಂದು ವರದಿ ಪ್ರಕಾರ ಹಝ್‌ರತ್ ಉಬೈದರ ಹಿಮ್ಮಡಿ ಕಡಿಯಲಾಗಿತ್ತು. ಅದರೊಳಗಿಂದ ಮಜ್ಜೆ ಹೊರ ಹರಿಯುತ್ತಿತ್ತು. ಅವರನ್ನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ತರಲಾಯಿತು. ಆಗ ಹಝ್‌ರತ್ ಉಬೈದ ಕೇಳಿದರು: ಅಲ್ಲಾಹನ ಸಂದೇಶವಾಹಕರೇ, ನಾನು ಶಹೀದನಾಗಿಲ್ಲವೇ? ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಏಕೆ ಅಲ್ಲ. ನೀವು ಶಹೀದರೇ ಆಗಿರುವಿರಿ.

ಒಂದು ವರದಿ ಹೀಗೆ ಸಹ ಇದೆ: ಹಝ್‌ರತ್ ಅಬೂ ಉಬೈದ ಬಿನ್ ಹಾರಿಸ್‌ರನ್ನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ತಂದಾಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ತಲೆಯನ್ನು ತನ್ನ ತೊಡೆಯ ಮೇಲಿರಿಸಿ ಮಲಗಿಸಿದಾಗ ಹಝ್‌ರತ್ ಅಬೂ ಉಬೈದ ಹೇಳಿದರು: ಈ ಸಮಯದಲ್ಲಿ ಅಬೂ ತಾಲಿಬ್ ಜೀವಿಸಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು. ಅವರು ಅನೇಕ ಸಾರಿ ಹೇಳುತ್ತಿದ್ದ ಮಾತುಗಳನ್ನು ಹೇಳಲು ನಾನು ಅವರಿಗಿಂತ ಹೆಚ್ಚು ಹಕ್ಕನ್ನು ಹೊಂದಿದ್ದೇನೆಂದು ಅವರು ತಿಳಿದುಕೊಳ್ಳುತ್ತಿದ್ದರು. ಅಬೂ ತಾಲಿಬ್ ಹೇಳುತ್ತಿದ್ದರು: **ವ ನುಸಲ್ಲಿಮುಹು ಹತ್ತಾ ನಸ್‌ರಅ ಹೌಲಹೂ, ವ ನಝ್‌ಹಲ ಅನ್ ಅಬ್‌ನಾಯಿನಾ ವಲ್ ಹಲಾಯಿಲ** – (ನಾವು ಮುಹಮ್ಮದನನ್ನು ನಿಮಗೆ ಬಿಟ್ಟುಕೊಡುವೆವು ಎಂದು ಹೇಳುವುದು ಸುಳ್ಳಾಗಿದೆ, ನಾವು ಮುಹಮ್ಮದರ ಸುತ್ತು ಮುತ್ತಲಿಂದ ಒದ್ದೋಡಿಸಲ್ಪಟ್ಟು ನಮ್ಮ ಪುತ್ರರ ಮತ್ತು ಪತ್ನಿಯರ ಬಗ್ಗೆ ನಿರ್ಲಕ್ಷ್ಯರಾದಾಗ ಮಾತ್ರ ಇದು ಸಾಧ್ಯವಾಗುವುದು). ಆ ಕಾಲದ ಜನರ ಭಾವನೆಗಳು ಆ ರೀತಿ ಇದ್ದುವು. ಶಹಾದತ್ ಸಮಯದಲ್ಲಿ ಹಝ್‌ರತ್ ಉಬೈದ ಬಿನ್ ಹಾರಿಸರ ಪ್ರಾಯ 63 ಆಗಿತ್ತು.

ಈ ಸಹಾಬರ ಬಗ್ಗೆ ಪ್ರಸ್ತಾಪಿಸಿದ ನಂತರ ಇಂಡೋನೇಶಿಯಾದಲ್ಲಿ ದೀರ್ಘಕಾಲ ಜಮಾಅತಿಗೆ ಸೇವೆ ಸಲ್ಲಿಸಿದ ಮುಬಲ್ಲಿಗರೂ ವಾಕಿಫೆ ಝಿಂದಗಿಯೂ ಆಗಿದ್ದ ಸುಯೂತಿ ಅಝೀಝ್ ಅಹ್ಮದ್ ಸಾಹಿಬರ ಬಗ್ಗೆ ವಿವರಿಸುವೆನು. ಅವರು ನವೆಂಬರ್ 19ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಪತ್ನಿ ಇಬ್ಬರು ಪುತ್ರ ಪುತ್ರಿಯರು, ಹತ್ತು ಗಂಡು ಮತ್ತು ಹೆಣ್ಣು ಮೊಮ್ಮಕ್ಕಳು ಮೊದಲಾದವರನ್ನು ಅವರು ಅಗಲಿ ಹೋಗಿದ್ದಾರೆ. ಅವರ ಪೈಕಿ ಆರು ಮಕ್ಕಳು ವಕ್‌ಫೇ ನೌನಲ್ಲಿ ಸೇರಿದ್ದಾರೆ. ಅವರು 1944 ಅಗಸ್ಟ್ ದಿನಾಂಕ 17ರಂದು ದಕ್ಷಿಣ ಸೋಲಾವೇಸಿ ದ್ವೀಪದ ಬೋನೋದಲ್ಲಿ ಜನಿಸಿದರು. ಅವರು 1966ರಿಂದ 1971ರ ತನಕ ರಬ್ವದ ಜಾಮಿಅ ಅಹ್ಮದಿಯಾದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಗಳಿಸಿದರು. 1972ರಲ್ಲಿ ಅವರನ್ನು ಇಂಡೋನೇಶಿಯಾದ ಮುಬಲ್ಲಿಗರನ್ನಾಗಿ ಕೇಂದ್ರ ನೇಮಿಸಿತು. 2000ದಲ್ಲಿ ಅವರು ಹಜ್ ಅನುಷ್ಠಿಸುವ ಭಾಗ್ಯ ಗಳಿಸಿದರು. 1972ರಿಂದ 1979ರ ತನಕ ಅವರು ದಕ್ಷಿಣ ಸುಮಾತ್ರಾ, ಲಾಂಪೋಂಗ್, ಜಾಂಬಿ ಮತ್ತು ಬೇಂಕೋಲೋದಲ್ಲಿ ಮುಬಲ್ಲಿಗರಾಗಿ ಕೆಲಸ ಮಾಡಿದರು. 1979ರಿಂದ 1981ರ ತನಕ ಮುಅಲ್ಲಿಮ್

ಕ್ಲಾಸಿನಲ್ಲಿ ಅಧ್ಯಾಪಕರಾಗಿದ್ದರು. 1981ರಲ್ಲಿ ಪೋರ್ ಬೋಕೇತೋ ಜಮಾಅತ್‌ನಲ್ಲಿ ಮುಬಲ್ಲಿಗರಾಗಿದ್ದರು. 1982ರಲ್ಲಿ ಮುಅಲ್ಲಿಮ್-ಮುಬಲ್ಲಿಗ್ ಕ್ಲಾಸ್‌ಗಳಲ್ಲಿ ಡಿಪ್ಯುಟಿ ಡೈರೆಕ್ಟರ್ ಆಗಿ ನೇಮಿಸಲ್ಪಟ್ಟರು. 1982ರಿಂದ 1992ರ ತನಕ ಜಾಮಿಅ ಅಹ್ಮದಿಯಾ ಇಂಡೋನೇಶಿಯಾದ ಪ್ರಿನ್ಸಿಪಾಲ್ ಆಗಿದ್ದರು. 1992ರಿಂದ 2016ರ ತನಕ ಅವರು ರಈಸುತ್ತಬ್‌ಲೀಗ್ ಆಗಿದ್ದರು. 2016ರಿಂದ ಅವರು ನಿಧನ ಹೊಂದುವ ತನಕ ಜಾಮಿಅ ಅಹ್ಮದಿಯಾ ಇಂಡೋನೇಶಿಯಾದ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸುವ ಭಾಗ್ಯ ಗಳಿಸಿದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿದ ಬಗ್ಗೆ ಒಂದು ಸಂದರ್ಶನದಲ್ಲಿ ಅವರು ಹೀಗೆ ಹೇಳಿದರು: ನಾನು ಮತ್ತು ನನ್ನ ಕುಟುಂಬದ ಜನರು ಬೈಅತ್ ಮಾಡಲು ಎಲ್ಲದಕ್ಕಿಂತ ದೊಡ್ಡ ಕಾರಣವೇನೆಂದರೆ ನನ್ನ ಅಜ್ಜ ವಸಿಯ್ಯತ್ ಮಾಡಿದ್ದರು, ಆಖಿರಿ ಝಮಾನದಲ್ಲಿ ಇಮಾಮ್ ಮಹ್‌ದಿ ಆಗಮಿಸುವರು ಅವರು ಆಗಮಿಸಿದಾಗ ನೀವೆಲ್ಲರೂ ಅವರಿಗೆ ಬೈಅತ್ ಮಾಡಿರಿ ಎಂದು. ಈ ವಸಿಯ್ಯತ್ ಈಡೇರಿಸಲು ನಮ್ಮ ಕುಟುಂಬ ಎರಡು ಸಾರಿ ಹಿಜ್‌ರತ್ ಮಾಡಿತು. 1959ರಲ್ಲಿ ನಮ್ಮ ಕುಟುಂಬ ಲಾಂಪೋಂಗ್‌ಗೆ ಹಿಜ್‌ರತ್ ಮಾಡಿತು. 1963ರಲ್ಲಿ ಒಬ್ಬ ಮುಬಲ್ಲಿಗ್ ಮೌಲಾನಾ ಝೈನಿ ದಹ್‌ಲಾನ್ ಸಾಹಿಬ್ ತಬ್ಲೀಗ್‌ಗೋಸ್ಕರ ಲಾಂಪೋಂಗ್‌ಗೆ ಆಗಮಿಸಿದರು. ಇಮಾಮ್ ಮಹ್‌ದಿ ಆಗಮಿಸಿರುವರೆಂದು ಅವರು ತಿಳಿಸಿದರು. ಹಾಗೆ 1963 ಫೆಬ್ರವರಿ ದಿನಾಂಕ 13ರಂದು, ನನ್ನ ಹತ್ತೊಂಬತ್ತನೆಯ ಪ್ರಾಯದಲ್ಲಿ ನಾನು ಮತ್ತು ನನ್ನ ಕುಟುಂಬದ ನಲ್ವತ್ತು ಜನರು ಮೌಲಾನ ಝೈನಿ ದಹ್‌ಲಾನ್ ಸಾಹಿಬ್ ಮೂಲಕ ಬೈಅತ್ ಮಾಡಿದೆವು.

ಸುಯೂತಿ ಅಝೀಝ್ ಸಾಹಿಬ್ ಹೇಳಿದರು: ನಾನು ರಬ್ವದಲ್ಲಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನೇಕ ಸಹಾಬರನ್ನು ಭೇಟಿಯಾಗುವ ಭಾಗ್ಯ ಗಳಿಸಿದ್ದೆನು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರೊಂದಿಗೆ ನಡೆದ ಒಂದು ಹರ್ಷದಾಯ ಭೇಟಿಯನ್ನು ವಿವರಿಸುತ್ತಾ ಅವರು ಹೇಳಿದರು: ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರವರನ್ನು ಖಲೀಫರನ್ನಾಗಿ ಆಯ್ಕೆ ಮಾಡಿದಾಗ ನಾವು ಅವರನ್ನು ಮೊದಲ ಬಾರಿ ಭೇಟಿಯಾದೆವು ಮತ್ತು ಅವರನ್ನು ಆಲಿಂಗಿಸಿದೆವು. ಹುಝೂರ್ ರಹ್ಮಹುಲ್ಲಾಹು ತಆಲಾ ನಮ್ಮ ಕೆನ್ನೆಯನ್ನು ತಟ್ಟಿ ಹೇಳಿದರು: ಇವರು ಇಂಡೋನೇಶಿಯಾದಿಂದ ಬಂದಿದ್ದಾರೆ ಎಂದು. ಅವರು ಹೇಳಿದರು: ನೀವು ಎಲ್ಲರೂ ಬಹಳ ದೂರದಿಂದ ಆಗಮಿಸಿದ ನನ್ನ ಮಕ್ಕಳಾಗಿರುವಿರಿ. ಸುಯೂತಿ ಅಝೀಝ್ ಸಾಹಿಬರು ಹೇಳುತ್ತಾರೆ: ಖಲೀಫತುಲ್ ಮಸೀಹ್ ಸಾಲಿಸರ ಆಧ್ಯಾತ್ಮಿಕ ಪ್ರಕಾಶ ಯಾವಾಗಲೂ ನಮ್ಮ ಜೊತೆಗಿತ್ತು. ಆ ಕಾರಣದಿಂದ ನಮ್ಮ ಕಷ್ಟಗಳೆಲ್ಲ ನಿವಾರಣೆಗೊಂಡವು. ನಾನು ಇಂಡೋನೇಶಿಯಾಕ್ಕೆ ಮರಳಿ ಹೋಗಲು ಸಿದ್ಧನಾದಾಗ ನಾನು ಹೊರಡುವ ಮೊದಲು ಭೇಟಿಯಾದೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಕೇಳಿದರು: ನಿಮಗೆ ಏನು ಬೇಕಾಗಿದೆ. 'ನನಗೆ ಕೆಲವು ಪುಸ್ತಕಗಳು ಬೇಕು' ಎಂದು ನಾನು ಹೇಳಿದೆ. 'ಸುಯೂತಿಗೆ ಪುಸ್ತಕಗಳನ್ನು ಕೊಡಿರಿ' ಎಂದು ಹಝ್ರತ್ ಖಲೀಫತುಲ್ ಮಸೀಹ್ ನೋಟ್ ಬರೆದರು.

ಅವರು ಹೇಳುತ್ತಾರೆ: ನನಗೆ ರೂಹಾನೀ ಖಝಾಇನ್ ಸಂಪೂರ್ಣ ಸಂಪುಟಗಳು ದೊರೆತವು. ಅದು ಈಗ ಸಹ ನನ್ನ ಬಳಿ ಇದೆ. ನಾನು ಹೊರಡುವ ಮೊದಲು ಹುಝೂರ್ ರಹಿಮಹುಲ್ಲಾಹು ಹೆಚ್ಚು ಹೊತ್ತು ನನ್ನನ್ನು ಆಲಿಂಗಿಸಿ ನನ್ನ ಕಿವಿಯಲ್ಲಿ ಹೇಳಿದರು: 'ತನ್ನ ಯಜಮಾನನೊಂದಿಗೆ ನಿಷ್ಠಾಹೀನನಾಗಿ ವರ್ತಿಸಬಾರದು. ಇದು ನನ್ನ ಉಪದೇಶವಾಗಿದೆ'.

ಇಂಡೋನೇಶಿಯಾದ ಅಮೀರ್ ಅಬ್ದುಲ್ ಬಾಸಿತ್ ಸಾಹಿಬ್ ಬರೆಯುತ್ತಾರೆ: ಸುಯೂತಿ ಅಝೀಝ್ ಸಾಹಿಬರು ಬಹಳ ಸರಳ ಪ್ರಕೃತಿ ಹೊಂದಿದವರಾಗಿದ್ದರು. ಅವರು ವಿನಯದ ಅತ್ಯುನ್ನತ ಮಾದರಿಯಾಗಿದ್ದರು. ಪ್ರತಿಯೊಂದು ಸ್ಥಿತಿಯಲ್ಲಿಯೂ ಸಹನೆ ದೋರುವವರಾಗಿದ್ದರು. ಪ್ರಾರ್ಥಿಸುವವರೂ ತಹಜ್ಜುದ್ ನಮಾಝ್ ಅನುಷ್ಠಿಸುವವರೂ ಆಗಿದ್ದರು. ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಇಟ್ಟವರಾಗಿದ್ದರು. ಖಿಲಾಫತ್ ವ್ಯವಸ್ಥೆ ಮತ್ತು ಖಲೀಫರ ಜೊತೆಗೆ ಬಹಳ ಹೃತ್ಪೂರ್ವಕ ಪ್ರೀತಿ ಹೊಂದಿದವರಾಗಿದ್ದರು. ಅವರು ಜಮಾಅತಿನ ಕೆಲಸಗಳಿಗೆ ತಮ್ಮ ವೈಯ್ಯಕ್ತಿಕ ಕೆಲಸಗಳ ಮೇಲೆ ಯಾವಾಗಲೂ ಆದ್ಯತೆ ನೀಡುವವರಾಗಿದ್ದರು.

ಅವರ ಒಬ್ಬ ಪುತ್ರಿ ಮರ್‌ದಿಯ ಸಾಹಿಬ ಬರೆಯುತ್ತಾರೆ: ನನ್ನ ತಂದೆಯವರು ತಮ್ಮ ಜೀವಿತವನ್ನು ಜಮಾಅತಿಗೆ ಅರ್ಪಿಸಿದ್ದರು. ಅವರು ಜಮಾಅತಿನ ಕೆಲಸ ಮಾಡುತ್ತಾ ಜೀವಿಸಿದರು. ಅವರು ನೀಡುತ್ತಿದ್ದ ತರಬೇತಿ ಹೇಗಿತ್ತೆಂದರೆ ಅವರು ಹೆಚ್ಚು ಉಪದೇಶ ನೀಡುತ್ತಿರಲಿಲ್ಲ. ಅವರು ತನ್ನ ಕೆಲಸಗಳ ಮೂಲಕ ತಮ್ಮ ಆದರ್ಶ ಮಾದರಿಯನ್ನು ತೋರಿಸುತ್ತಿದ್ದರು. ಅವರ ಇನ್ನೊಬ್ಬ ಮಗಳು ಅತಿಯ್ಯತುಲ್ ಅಲೀಮ್ ಹೇಳುತ್ತಾರೆ: ನಮ್ಮ ತಂದೆ ಯಾವಾಗಲೂ ಸತ್ಯವನ್ನು ಹೇಳುತ್ತಿದ್ದರು. ಅವರು ತಮ್ಮ ಮಕ್ಕಳೊಂದಿಗೆ ಎಂದೂ ಸುಳ್ಳು ಹೇಳುತ್ತಿರಲಿಲ್ಲ. ತಹಜ್ಜುದ್ ನಮಾಝನ್ನು ಎಂದೂ ಬಿಟ್ಟು ಬಿಡುತ್ತಿರಲಿಲ್ಲ. ಯಾವಾಗಲೂ ಮಸೀದಿಗೆ ಹೋಗಿ ಜಮಾಅತಾಗಿ ನಮಾಝ್ ನಿರ್ವಹಿಸುತ್ತಿದ್ದರು.

ಅವರ ಎರಡನೇ ಪತ್ನಿ ಹೇಳಿದರು: ಅವರು ರಬ್ವಕ್ಕೆ ಹೋಗುವ ಮೊದಲು ಮಕ್ಕಳೊಂದಿಗೆ ಹೇಳಿದರು: ನನ್ನ ಕುಟುಂಬ, ನನ್ನ ಮನೆಯವರು, ನನ್ನ ವಾರೀಸುದಾರರು ಖಿಲಾಫತ್ ಆಗಿದೆ. ನನ್ನ ಜೀವಿತ ಮತ್ತು ಮರಣ ಜಮಾಅತಿಗೋಸ್ಕರವಾಗಿದೆ.

ಮುಬಲ್ಲಿಗರಾದ ಅಹ್ಮದ್ ನೂರ್ ಹೇಳುತ್ತಾರೆ: ಅವರ ಒಂದು ಉಪದೇಶವನ್ನು ನಾನು ಯಾವಾಗಲೂ ನೆನಪಿಟ್ಟುಕೊಳ್ಳುತ್ತಿದ್ದೇನೆ. ಅದೆಂದರೆ ಸರ್ವಶಕ್ತನಾದ ಅಲ್ಲಾಹನಿಂದ ಎಂದೂ ಮುಖ ತಿರುಗಿಸಬೇಡ. ನೀನು ಅಲ್ಲಾಹನಿಂದ ಬೇಡಿಕೊಳ್ಳು ಅವನು ತನ್ನ ದಾಸನ ಪ್ರಾರ್ಥನೆಯನ್ನು ಎಂದೂ ತಿರಸ್ಕರಿಸುವುದಿಲ್ಲ. ಮುಬಲ್ಲಿಗರಾದ ಹಾಶಿಮ್ ಸಾಹಿಬರು ಬರೆಯುತ್ತಾರೆ: ಒಮ್ಮೆ ಅವರು ನಮ್ಮೊಂದಿಗೆ ಒಂದು ಪ್ರಶ್ನೆ ಕೇಳಿದರು. ಅಹ್ಮದಿಯಾ

ಜಮಾಅತಿನ ಸತ್ಯತೆಗೆ ಇರುವ ಎಲ್ಲದಕ್ಕಿಂತಲೂ ದೊಡ್ಡ ಸಾಕ್ಷ್ಯಾಧಾರ ಏನು? ಎಂದು. ನಾವು ಅವರಿಗೆ ಪವಿತ್ರ ಖುರ್‌ಆನ್, ಹದೀಸುಗಳ ಮೂಲಕ ಉತ್ತರ ನೀಡಿದೆವು. ಅವರು ಹೇಳಿದರು: ಪ್ರತಿಯೊಬ್ಬ ಅಹ್ಮದಿ ತನ್ನನ್ನು ಅಹ್ಮದಿಯಾ ಜಮಾಅತಿನ ಸತ್ಯತೆಗಿರುವ ಒಂದು ಸಾಕ್ಷ್ಯಾಧಾರವೆಂದು ಪರಿಗಣಿಸಬೇಕಾಗಿದೆ. ನೀವು ಪ್ರತಿಯೊಬ್ಬರು ನಿಮ್ಮನ್ನು ಎಷ್ಟು ಸಾಮರ್ಥ್ಯವಂತರನ್ನಾಗಿ ಮಾಡಬೇಕೆಂದರೆ ನಮ್ಮ ಪೈಕಿ ಪ್ರತಿಯೊಬ್ಬನು ಈ ಜಮಾಅತಿನ ಸತ್ಯತೆಗೆ ಸಾಕ್ಷ್ಯಾಧಾರವಾಗಬೇಕು.

ಅವರು ಖುತ್‌ಬಗಳನ್ನು ಬಹಳ ಲಕ್ಷ್ಯವಿಟ್ಟು ಆಲಿಸುತ್ತಿದ್ದರು. ನಂತರ ಅವರು ಖುತ್‌ಬಗಳ ಸಾರಾಂಶಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಿದ್ದರು. ವಿದ್ಯಾರ್ಥಿಗಳು ಮನವರಿಕೆ ಮಾಡಿದ್ದಾರೆಂಬುದನ್ನು ಅವರು ಯಾವಾಗಲೂ ನೋಡುತ್ತಿದ್ದರು. ಖಲೀಫರ ಸಂದೇಶವನ್ನು ಅರಿತುಕೊಂಡು ಅನುಸರಿಸುವ ಬಗ್ಗೆ ಅವರು ಉಪದೇಶಿಸುತ್ತಿದ್ದರು.ಅವರು ಅಲ್ಲಾಹನ ಅನುಗ್ರಹದಿಂದ ಮೂಸೀ ಆಗಿದ್ದರು. ಅವರ ಜನಾಝ ನವೆಂಬರ್ 23ರಂದು ಪಾಕಿಸ್ಥಾನದಿಂದ ಇಂಡೋನೇಶಿಯ ತಲಪಿತು. ನವೆಂಬರ್ 24ರಂದು ನಮ್ಮ ಕೇಂದ್ರವಾದ ಪಾರೂಮ್‌ನಲ್ಲಿ ಮೂಸಿಗಳ ಖಬರಿಸ್ಥಾನದಲ್ಲಿ ದಫನ್ ಮಾಡಲಾಯಿತು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಜನ್ನತುಲ್ ಫಿರ್‌ದೌಸ್‌ನಲ್ಲಿ ಉನ್ನತ ಸ್ಥಾನ ದಯಪಾಲಿಸಲಿ. ಅವರ ಎಲ್ಲ ಸಂಬಂಧಿಕರಿಗೆ ಸಹನೆಯನ್ನು ಅಲ್ಲಾಹನು ನೀಡಲಿ. ಅವರ ಮಕ್ಕಳು ಮತ್ತು ಮುಂದಿನ ಪೀಳಿಗೆಗಳು ಅವರ ಹೆಜ್ಜೆ ಗುರುತುಗಳನ್ನು ಅನುಸರಿಸಿ ಚಲಿಸಲು ಅಲ್ಲಾಹನು ಭಾಗ್ಯ ದಯಪಾಲಿಸಲಿ – ಆಮೀನ್.

———————*****———————


***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 30-11-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon